ಸೇರುತ್ತಿತ್ತಲ್ಲ. "ಮಕ್ಕಳನ್ನು ಒಳ್ಳೆಯ ಶಾಲೆಗೆ ಸೇರಿಸಿ ಮಾವ" ಎಂದು ದುಂಬಾಲು ಬಿದ್ದು ನಾಗುವೇ ಸೇರಿಸಿದ್ದಳು. ಒಟ್ಟಿನಲ್ಲಿ ಈಗ ಸ್ಟುಡಿಯೋದಲ್ಲಿ ಆಂಜನಪ್ಪ ಇರದಿದ್ದರೂ ಪರವಾಗಿಲ್ಲ, ನಾಗು ಇರಬೇಕಿತ್ತು. ಅಷ್ಟು ಮೋಡಿ ಮಾಡಿಬಿಟ್ಟಿದ್ದಳು.

ಮುಂದೆ ಕೆಲವೇ ದಿನಗಳಲ್ಲಿ 'ಮನೆಯ ಮಂದಾರ' ಚಿತ್ರದ ಶೂಟಿಂಗ್ ಆರಂಭವಾಯಿತು. ಖ್ಯಾತ ಹೀರೋ, ಹೀರೋಯಿನ್ ಅದಕ್ಕಾಗೇ ಬಂದಿಳಿದರು. ಯಥಾಪ್ರಕಾರ ಸೆಟ್ ತಯಾರಾಯಿತು. ಮನೆಯ ಮುಂದೆ ನಾಗು ಸುಂದರವಾದ ಹಸೆ ಬಿಡಿಸಿದಳು. ಆರ್ಮುಗಂ 'ಭೇಷ್' ಎಂದರೆ ಹೀರೊ, ಹೀರೋಯಿನ್ 'ಬ್ಯೂಟಿಫುಲ್' ಎಂದದ್ದಾಯಿತು. ಇನ್ನೇನು ಶೂಟಿಂಗ್ ಆರಂಭವಾಗುವ ಹಂತದಲ್ಲಿ ಸಂಭಾವನೆಗೋಸ್ಕರ ತಕರಾರು ಬಂತು. 'ಕಡಿಮೆಯಾಗುತ್ತೆ. ನಾನು ಮಾಡಲ್ಲ' ಎಂದು ಕ್ಯಾತೆ ತೆಗೆದ ಹೀರೋಯಿನ್ ಹೊರನಡೆದಳು. ನಿರ್ದೇಶಕ, ನಿರ್ಮಾಪಕರಿಬ್ಬರೂ ಹಿಂದೆ ಓಡಿ ಎಷ್ಟೇ ಅನುನಯಿಸಿದರೂ ಕೇಳಲಿಲ್ಲ. "ನಾನು ಕೇಳಿದಷ್ಟು ಸಂಭಾವನೆ ಕೊಡಿ. ಮೊದಲ ಕಂತು ಕೈಲಿಟ್ಟ ಮೇಲೆ ಶೂಟಿಂಗ್" ಎಂದು ಖಡಾಖಂಡಿತವಾಗಿ ಹೇಳಿದಳು. ನಿರ್ಮಾಪಕರು ಕಾಲು ಹಿಡಿಯುವದೊಂದೇ ಬಾಕಿ. "ಎಲ್ಲ ಸಿದ್ಧತೆಯಾಗಿದೆ ಮೇಡಂ. ಈಗ ಹೀಗಂದ್ರೆ ತುಂಬಾ ಲಾಸ್ ಆಗುತ್ತೆ" ಎಂದ ಅಳುಗೊರಲಿನಲ್ಲಿ. ಅವಳು ಸುತರಾಂ ಒಪ್ಪದೇ, "ಹೀಗೆ ಹೇಳಿದರೇನೆ ನಿಮಗೆ ತಾಗೋದು" ಎಂದು ಕಾರಿನಲ್ಲಿ ಕುಳಿತಳು. ಆರ್ಮುಗಂನ ಮುಖ ಸಿಟ್ಟಿನಿಂದ ಕೆಂಪಡರಿತ್ತು. "ಬೇಡ ಬಿಡಿ ಸಾರ್, ಇವಳಿಗಿಂತ ಚೆನ್ನಾಗಿರೋಳ್ನ ಹಾಕ್ಕಂಡು ಮಾಡಿದರಾಯಿತು" ಎಂದ. ಅವಳೊಮ್ಮೆ ಬಿರುಗಣ್ಣಿನಿಂದ ನೋಡಿ, "ಮಾಡ್ಕೊಳ್ಳಿ" ಎಂದದ್ದೇ ರಪ್ಪನೇ ಬಾಗಿಲು ಹಾಕಿದಳು. ಕಾರು ಕಾಯದೇ ಹೊರಟು ಹೋಯಿತು.

ಹೇಳಿದ್ದೇನೋ ಸರಿ, ಆದರೆ ಅಷ್ಟು ಬೇಗ ಇನ್ನೊಬ್ಬಳನ್ನು ತರುವದು ಸುಲಭದ ಮಾತಲ್ಲ. ಡೇಟ್‌ಗಳು, ಸಂಭಾವನೆ... ಎಲ್ಲ ಹೊಂದಬೇಕಲ್ಲ. "ಈಗ ಮತ್ತಾರನ್ನ ಕೇಳೋದು ಆರ್ಮುಗಂ?..." ಎಂದ ನಿರ್ಮಾಪಕ. "ಹೊಸಬರನ್ನೇ ಹಾಕಿದರಾಯಿತು" ಎಂದ ಆರ್ಮುಗಂ ನಿರಾಳ ಭಾವದಲ್ಲಿ. "ಹೊಸಬರೇ... ಮತ್ತೆ ಆಡಿಷನ್?..." ಎನ್ನುತ್ತಿದ್ದಂತೆ, "ನಾಗು, ಬಾ ಇಲ್ಲಿ" ಎಂದು ಕರೆದ. ಬಂದು ನಿಂತವಳನ್ನು, "ಈ ಹಾಡಿಗೆ ಅಭಿನಯಿಸು" ಎಂದ. ಬೆಕ್ಕಸ ಬೆರಗಾದವಳು, "ನಾನೇ?... ನನಗೆ... ನನಗೆ ಬರಲ್ಲ" ಎಂದು ಹಿಂಜರಿದು ಆಂಜನಪ್ಪನತ್ತ ನೋಡಿದಳು. ಆ ಮುಖದಲ್ಲೂ ಅಚ್ಚರಿಯ ಹೊರತಾಗಿ ಬೇರೇನೂ ಕಾಣಲಿಲ್ಲ. ಆರ್ಮುಗಂ, "ಬೇಗ" ಎಂದಾಗ ವಿಧಿಯಿಲ್ಲದೇ ತಾನೇ ಬಿಡಿಸಿದ ರಂಗವಲ್ಲಿಯ ಪಕ್ಕ ಕುಳಿತು ಹಾಡಿಗೆ ತಕ್ಕಂತೆ ಅಭಿನಯಿಸಿದಳು. ಮೊದಲು ಕೊಂಚ ಅಳುಕಿದ್ದರೂ ನಂತರ ಚೆನ್ನಾಗಿ ಮೂಡಿ ಬಂತು. "ಗುಡ್" ಎಂದ ಆರ್ಮುಗಂ. ನಿರ್ಮಾಪಕನ ಮುಖದಲ್ಲಿ ಮಂದಹಾಸವಿದ್ದರೂ ಆತಂಕ ತುಂಬಿತ್ತು. ಹೊಸಬಳಲ್ಲವೇ, ಜನ ಹೇಗೆ ಸ್ವೀಕರಿಸುತ್ತಾರೋ ಎಂಬ ಚಿಂತೆ. ಆಂಜನಪ್ಪ ಆಶ್ಚರ್ಯದಿಂದ ಬಾಯಿ ತೆರೆದುಕೊಂಡು ನಿಂತಿದ್ದಂತೆ ನಾಗು ನಾಯಕಿಯಾದಳು.

ಮುಂದೆ ನಡೆದದ್ದು ಇತಿಹಾಸ. 'ಮನೆಯ ಮಂದಾರ' ಪ್ರಖ್ಯಾತವಾಗಿ ಗೋಲ್ಡನ್ ಜುಬಿಲಿ ಆಚರಿಸಿಕೊಂಡಿತು. ಬಿಟ್ಟು ನಡೆದ ನಾಯಕಿ ಬಾಯಿ ಬಡಿದುಕೊಂಡಳು. ನಾಗು ತನ್ನವ್ವ, ಅಪ್ಪರನ್ನು ನೆನೆಸಿ ಆನಂದಬಾಷ್ಪ ಸುರಿಸಿದಳು. ಸಂತಸದಿಂದ ಪ್ರಕಾಶನಿಗೆ ಮತ್ತೊಂದು ಪತ್ರ ಬರೆದು ಹಾಕಿದಳು. ಸೌದಾಮಿನಿಯ ಪಾತ್ರ ಮಾಡಿದವಳು ಅದೇ ಹೆಸರಲ್ಲಿ ಖ್ಯಾತಳಾದಳು. ಮನೆಯ ಜನರೆಲ್ಲರ ಪ್ರೀತಿ ವಿಶ್ವಾಸ ಗಳಿಸಿ ತ್ಯಾಗಮಯಿಯಾಗಿ ಮನೆತನವನ್ನೇ ಕಾಪಾಡುವ